## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು

**ವಿಷಯದ ಸಂಖ್ಯೆ:178/2008-09**

ಚಿಲ್ಡ್ರನ್ಸ್ ಇಂಡಿಯಾ ಸಂಸ್ಥೆಯವರಿಗೆ ಅನುದಾನ/ಸಹಾಯಧನ ಮಂಜೂರು ಮಾಡುವ ಬಗ್ಗೆ.

**ಪ್ರಸ್ತಾವನೆ:**

ಚಿಲ್ಡ್ರನ್ಸ್ ಇಂಡಿಯಾ, 1ನೇ ಮಹಡಿ, ಮೈಶುಗರ್ ಬಿಲ್ಡಿಂಗ್, ಜೆ.ಸಿ.ರಸ್ತೆ, ಬೆಂಗಳೂರು, ಸಂಸ್ಥೆಯವರು ಅರ್ಜಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮದು ಒಂದು ಸ್ವಯಂ ಸೇವಾ ಸಂಸ್ಥೆಯಾಗಿದ್ದು, ಸಂಕ್ರಾಂತಿ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ್ (ರಿ) ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಐದು ವರ್ಷಗಳಿಂದ ಸತತವಾಗಿ ಬೆಂಗಳೂರು ಸೇರಿದಂತೆ ಕರ್ನಾಟಕದ ವಿವಿಧ ಭಾಗಗಳಲ್ಲಿ ದೇಶೀಯ ಭಾಷೆಗಳ ಮಕ್ಕಳ ಚಿತ್ರಗಳನ್ನು ಮಾತ್ರವಲ್ಲದೆ, ಅಂತರರಾಷ್ಟ್ರೀಯ ಮಕ್ಕಳ ಚಿತ್ರೋತ್ಸವವನ್ನು ಏರ್ಪಡಿಸುವ ಮುಖಾಂತರ ಜಗತ್ತಿನ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲು ಪ್ರಯತ್ನಿಸುತ್ತಿರುವುದಾಗಿಯೂ, ಎಲ್ಲಾ ವರ್ಗದ ಮಕ್ಕಳಿಗೂ ಈ ಸಿನಿಮಾಗಳು ಲಭ್ಯವಾಗಬೇಕೆಂಬ ಉದ್ದೇಶದಿಂದ ವಿಶೇಷವಾಗಿ ಬೆಂಗಳೂರು ಮಹಾನಗರ ಪಾಲಿಕೆಯ ಶಾಲಾ ಮಕ್ಕಳು ಮತ್ತು ಸರ್ಕಾರಿ ಶಾಲಾ ಮಕ್ಕಳು ಈ ಚಿತ್ರಗಳನ್ನು ವೀಕ್ಷಿಸಲು ಅನುಕೂಲವಾಗುವಂತೆ ಪ್ರತಿ ನಿತ್ಯ ನಗರದ ವಿವಿಧ ಶಾಲೆಗಳಿಗೆ ಉಚಿತ ಸಾರಿಗೆ ಸೌಕರ್ಯವನ್ನು ಒದಗಿಸಲಾಗಿತ್ತೆಂದು ತಿಳಿಸಿ, ಫೆಬ್ರವರಿ 18 ರಂದು ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಉದ್ಘಾಟನೆಗೊಂಡ ಚಿತ್ರೋತ್ಸವ ಫೆಬ್ರವರಿ 21 ರವರೆಗೆ ನಾಲ್ಕು ದಿನಗಳ ಕಾಲ ಬಾಲಭವನ ಸೇರಿದಂತೆ ನಗರದ ನಾಲ್ಕು ಚಿತ್ರಮಂದಿರಗಳಲ್ಲಿ ಹಲವಾರು ಭಾರತೀಯ ಅತ್ಯುತ್ತಮ ಮಕ್ಕಳ ಚಲನಚಿತ್ರಗಳನ್ನು ಲಕ್ಷಾಂತರ ಮಂದಿ ಮಕ್ಕಳು ಯಾವ ಶುಲ್ಕ ಅಥವಾ ಪ್ರವೇಶದರವಿಲ್ಲದೆ ಆಸ್ವಾದಿಸಿದರು ಎಂಬುದಾಗಿ ತಿಳಿಸಿ, ಸಂಸ್ಥೆಯು ಯಾವುದೇ ಲಾಭದ ಅಪೇಕ್ಷೆ ಇಲ್ಲದೆ ಇಂತಹ ಅನೇಕ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಯೋಜನೆ ಹೊಂದಿದ್ದು, ಇದಕ್ಕೆಲ್ಲ ಸರ್ಕಾರ, ಸಂಘ, ಸಂಸ್ಥೆಗಳು ದಾನಿಗಳನ್ನು ಅವಲಂಬಿಸಬೇಕಾಗಿದ್ದು ಅನಿವಾರ್ಯವಾಗಿರುವುದರಿಂದ, ಈಗಾಗಲೇ ಚಿತ್ರೋತ್ಸವಕ್ಕೆ ಸುಮಾರು 35 ಲಕ್ಷಕ್ಕೂ ಹೆಚ್ಚು ಹಣ ವೆಚ್ಚವಾಗಿರುವುದಾಗಿ ತಿಳಿಸಿ, ಅನೇಕ ಬಾಬ್ತುಗಳಿಗೆ ಹಣ ಪಾವತಿಸಬೇಕಾಗಿರುವುದರಿಂದ ಕನಿಷ್ಠ ರೂ.5.00 ಲಕ್ಷಗಳ ಅನುದಾನವನ್ನಾಗಿ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಆಡಳಿತಗಾರರ ಗಮನಕ್ಕೆ ತರುತ್ತಾ, ಚಿಲ್ಡ್ರನ್ಸ್ ಇಂಡಿಯಾ ಸಂಸ್ಥೆಯು ಮಾಡುತ್ತಿರುವ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಾಗೂ ಅನುದಾನದ ಕೊರತೆಯಿರುವುದರಿಂದ, 2008-09ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮರು ಹಂಚಿಕೆ ಮಾಡಲ್ಪಟ್ಟು ಪಶ್ಚಿಮ ವಲಯಕ್ಕೆ ಮೀಸಲಿಟ್ಟಿರುವ ರೂ.15.00 ಲಕ್ಷಗಳಲ್ಲಿ ರೂ.1.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:10/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರ ದಿನಾಂಕ:10/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು

**ವಿಷಯದ ಸಂಖ್ಯೆ:179/08–09**

2007–08ನೇ ಸಾಲಿನ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ವಲಯವಾರು ಅನುಷ್ಠಾನಗೊಳಿಸಲು ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

2007–08ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳನ್ನು ವಲಯವಾರು ಅನುಷ್ಠಾನಗೊಳಿಸಲು ದಿನಾಂಕ:27/08/07 ರಂದು ಆದೇಶ ಹೊರಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ವಲಯದ ವ್ಯಾಪ್ತಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಅಲ್ಪಸಂಖ್ಯಾತ ವರ್ಗದ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿಗಾಗಿ ಧನ ಸಹಾಯವಾಗಿ ಕಾಯ್ದಿರಿಸುವ ಅನುದಾನ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರಿಗೆ ರೂ.9.00 ಹಾಗೂ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗದವರಿಗೆ 12.50 ಲಕ್ಷಗಳಾಗಿರುತ್ತವೆ.

ಸದರಿ ಪ್ರಸ್ತಾವನೆಯ ಬಗ್ಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ದಿನಾಂಕ:22/11/2007 ರ ಪ್ರಜಾವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಕೊನೆಯ ದಿನಾಂಕ:26/12/2007 ರಂದು ಎಂದು ನಿಗಧಿಪಡಿಸಲಾಗಿತ್ತು. ನಿಗಧಿತ ಅವಧಿಯೊಳಗೆ ಸಾಕಷ್ಟು ಅರ್ಜಿಗಳು ಸ್ವೀಕೃತವಾಗದೆ ಇದ್ದುದರಿಂದ ದಿನಾಂಕ:11/01/2008 ರವರೆಗೆ ಅರ್ಜಿ ಸಲ್ಲಿಸಲು ಸಮಯ ವಿಸ್ತರಿಸಲಾಯಿತು. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತ ವರ್ಗದವರಿಂದ ಈ ಕೆಳಕಂಡಂತೆ ಅರ್ಜಿಗಳು ಸ್ವೀಕೃತವಾಗಿರುತ್ತವೆ.

| ಕ್ರಮ ಸಂಖ್ಯೆ | ಕೋರಿರುವ ಪರೀಕ್ಷೆಯ ವಿಷಯ | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಂದ ಬಂದಿರುವ ಅರ್ಜಿಗಳ ವಿವರ | ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳಿಂದ ಬಂದಿರುವ ಅರ್ಜಿಗಳ ವಿವರ | ಒಟ್ಟು ಅರ್ಜಿಗಳ ಸಂಖ್ಯೆ | ತಲಾ ಅಭ್ಯರ್ಥಿಗಳಿಗೆ ತರಬೇತಿಗಾಗಿ ನಿಗಧಿ ಪಡಿಸಲಾದ ಶುಲ್ಕದ ಮೊತ್ತ | ಆಗಬಹುದಾದ ಮೊತ್ತ |
|---|---|---|---|---|---|---|
| 1 | ಎಸ್.ಡಿ.ಎ. | 35 | 41 | 76 | 12,000/– | 9,12,000/– |
| 2 | ಎಫ್.ಡಿ.ಎ. | 24 | 62 | 86 | 13,900/– | 11,95,400/– |
| 3 | ಕೆ.ಇ.ಎಸ್. (ಮುಖ್ಯ ಪರೀಕ್ಷೆ) | 13 | 35 | 48 | 25,000/– | 12,00,000/– |
| 4 | ಐ.ಎ.ಎಸ್. (ಪೂರ್ವ ಭಾವಿ) | 19 | 29 | 48 | 18,000/– | 8,64,000/– |
| | ಒಟ್ಟು | **91** | **167** | **258** | | **41,71,400/–** |

2007–08ನೇ ಸಾಲಿನ ಸ್ಪರ್ಧಾತ್ಮಕ ಪರೀಕ್ಷೆಯ ಐ.ಎ.ಎಸ್. ಪೂರ್ವಭಾವಿ ತರಬೇತಿ ಹಾಗೂ ಇತರೆ ಎಸ್.ಡಿ.ಎ., ಎಫ್.ಡಿ.ಎ., ಕೆ.ಇ.ಎಸ್. ಮುಖ್ಯ ಪರೀಕ್ಷೆಗಳಿಗೆ ಹಾಜರಾಗಲು ಬಯಸಿರುವ ಒಟ್ಟು 258 ಅಭ್ಯರ್ಥಿಗಳ ಪಟ್ಟಿಯನ್ನು ಕಛೇರಿಯ ಸಭೆಯ ನಡವಳಿಕೆಯಂತೆ ಅನುಮೋದಿಸಲಾಯಿತು.

. . . 2

ವಿಶೇಷ ಆಯುಕ್ತರು(ಆಡಳಿತ) ರವರು ಕಛೇರಿ ಸಂಖ್ಯೆ:ಕ.ಅ/ಪಿ4/ಪಿ.ಆರ್/817/0 ದಿನಾಂಕ:26/02/2008 ರಂತೆ ಎಲ್ –1 ಬಿಡ್‌ದಾರರಾದ ಮೆ:ಯೂನಿವರ್ಸಲ್ ಕೋಚಿಂಗ್ ಸೆಂ 2922/20, ಕಾರ್ಡ್ ರಸ್ತೆ, ಆರ್.ಪಿ.ಸಿ. ಬಡಾವಣೆ, ಅತ್ತಿಗುಪ್ಪೆ ಬಸ್ ನಿಲ್ದಾಣದ ಹತ್ತಿರ, ವಿಜಯ ಬೆಂಗಳೂರು – 40, ರವರಿಗೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳಿಗೆ ತರಬೇತಿ ನೀಡಲು ಈ ಮೇ ಸಂಸ್ಥೆಯನ್ನು ಕೇಂದ್ರ ಕಛೇರಿಯಿಂದ ಆಯ್ಕೆ ಮಾಡಲಾಗಿರುತ್ತದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ನಿಗಧಿಪಡಿಸಲಾದ ಅನುದಾನಗಳು ರೂ.9.00.0 ತಗಲಬಹುದಾದ ವೆಚ್ಚ ರೂ.14.20.600/– ವ್ಯತ್ಯಾಸದ ಮೊತ್ತ ರೂ.5.20.600/–

ಹಿಂದುಳಿದ ಹಾಗೂ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ತರಬೇತಿಗಾಗಿ ನಿಗಧಿಪಡಿಸಲಾದ ಅನು ರೂ.12.50 ಲಕ್ಷಗಳು ತರಬೇತಿಗೆ ತಗಲಬಹುದಾದ ಮೊತ್ತ ರೂ.27.50.800/– ಗಳಾಗಿದ್ದು, ವ್ಯತ್ಯಾಸ ರೂ.15,00,800/– ಗಳಾಗುತ್ತವೆ. ಈ ಹೆಚ್ಚುವರಿ ಕೊರತೆ ಬೇಕಾದ ಹಣಕ್ಕೆ ಈ ಸಾಲಿನಲ್ಲಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಲಾದ ಅನುದಾನದಿಂದ ಬದಲಿ ವ್ಯವಸ್ಥೆ ಮಾಡಿಕೊಳ್ಳಲು ಪ್ರಸ್ತಾಪಿಸಲಾಗಿದೆ.

ಈಗ ಪರೀಕ್ಷಾ ಪೂರ್ವ ತರಬೇತಿಗೆ ಕಾಲ ಮಿತಿ ಕಡಿಮೆ ಇರುವುದರಿಂದ ಅಭ್ಯರ್ಥಿಗಳಿಗೆ ಅನು ಕಲ್ಪಿಸುವ ದೃಷ್ಟಿಯಿಂದ ಮುಖ್ಯ ಕಛೇರಿಯ ವತಿಯಿಂದ ಟೆಂಡರ್‌ನಲ್ಲಿ ಆಯ್ಕೆಯಾಗಿರುವ ಎಲ್ ಬಿಡ್‌ದಾರರಾದ ಮೆ:ಯೂನಿವರ್ಸಲ್ ಕೋಚಿಂಗ್ ಸೆಂಟರ್, ವಿಜಯನಗರ, ಬೆಂಗಳೂರು – 40 ರವರಿಗೆ ಕಛೇರಿಯ ಸಮಸಂಖ್ಯೆ: ಅ.ಆ.(ದ)ಕ.ಇ./ಪಿ.ಆರ್/48/07–08 ದಿನಾಂಕ:22/03/2008 ರಂತೆ ಕಾರ್ಯಾ ನೀಡಲಾಗಿದೆ. ಆದುದರಿಂದ, ಸ್ಪರ್ಧಾತ್ಮಕ ಪರೀಕ್ಷೆಗೆ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಅನುಮೋದನೆ ಕ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16/05/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:16/05/2008 ರ ಟಿಪ್ಪಣಿಯನ್ನು ಒಪ್ಪಿದೆ.

([illegible])
ಅಧೀಕ್ಷಕರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು

**ವಿಷಯದ ಸಂಖ್ಯೆ:180/2008-09**

ಚಲ್ಲಘಟ್ಟ ಕಣಿವೆ ಪ್ಯಾಕೇಜ್-3 ರ ವ್ಯಾಪ್ತಿಯಲ್ಲಿರುವ ಕೋರಮಂಗಲ ಒಳ ವರ್ತುಲ ರಸ್ತೆಯಲ್ಲಿರುವ ಅಮರಜ್ಯೋತಿ ಬಡಾವಣೆಯಲ್ಲಿ ಮಳೆ ನೀರು ಚರಂಡಿಗಳ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ನೀರುಗಾಲುವೆ ಚಲ್ಲಘಟ್ಟ ಕಣಿವೆ ಪ್ಯಾಕೇಜ್-3 ರ ಅಡಿಯಲ್ಲಿರುವ ಕೋರಮಂಗಲ ಒಳ ವರ್ತುಲ ರಸ್ತೆಯಲ್ಲಿರುವ ಅಮರಜ್ಯೋತಿ ಬಡಾವಣೆಯನ್ನು ದಿನಾಂಕ:12/03/2008 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮಾನ್ಯ ಆಯುಕ್ತರವರು, ಮುಖ್ಯ ಅಭಿಯಂತರರು (ಬೃಹತ್ ನೀರು ಗಾಲುವೆ) ಜಂಟಿ ಆಯುಕ್ತರು (ಪೂರ್ವ) ಹಾಗೂ ಮಹಾನಗರ ಪಾಲಿಕೆ ಅಧಿಕರಿಗಳೊಂದಿಗೆ ಪರಿವೀಕ್ಷಿಸಿದ್ದು, ಮಳೆಗಾಲದಲ್ಲಿ ಸದರಿ ಬಡಾವಣೆಯ ನೀರು ಸರಾಗವಾಗಿ ಹರಿದು ಹೋಗದೆ ಜಲಾವೃತವಾಗುವುದಾಗಿ ತಿಳಿದು ಬಂದಿರುತ್ತದೆ ಹಾಗೂ ಒಳ ವರ್ತುಲ ರಸ್ತೆ (ಕೋರಮಂಗಲ ರಿಂಗ್ ರಸ್ತೆ) ಯಲ್ಲಿ ಮಳೆಗಾಲದಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದ್ದು, ಸದರಿ ಮಳೆ ನೀರು ಚರಂಡಿಗಳನ್ನು ಅಭಿವೃದ್ಧಿಪಡಿಸಲು ಆದೇಶಿಸಿದ್ದರ ಮೇರೆಗೆ 2007-08 ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿಕೊಂಡು ರೂ.95.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಕೋರಿದೆ.

1. ಕಾಮಗಾರಿಯ ಅಂದಾಜು ಮೊತ್ತ ರೂ.95.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಕೋರಿದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಈಗಾಗಲೇ JNNURM ಯೋಜನೆ ಅಡಿಯಲ್ಲಿ ಚಲ್ಲಘಟ್ಟ ಕಣಿವೆ ಪುನರ್ ನವೀಕರಣ ಕಾಮಗಾರಿಗೆ ಮಂಜೂರಾಗಿದ್ದು, ಉಳಿತಾಯವಾಗುವ ಹಣದಿಂದ ಭರಿಸಬಹುದಾಗಿರುತ್ತದೆ. ಇದಕ್ಕೆ ಅನುಮೋದನೆ ದೊರೆಯದಿದ್ದಲ್ಲಿ ಕಾಮಗಾರಿಯ ಅವಶ್ಯಕತೆಯನ್ನು ಪರಿಗಣಿಸಿ, ಈ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮೊತ್ತದಲ್ಲಿ ಈ ಕಾಮಗಾರಿಯನ್ನು ನಿರ್ವಹಿಸಲಾಗುವುದು.

2. ಮುಂದೆ ಬರುವ ಮಳೆಯಿಂದ ಹಾನಿ ಸಂಭವಿಸುವುದನ್ನು ತಡೆಗಟ್ಟಲು ತುರ್ತು ಎಂದು ಪರಿಗಣಿಸಿ ಮಳೆಯಿಂದಾದ ಪ್ರಕೃತಿ ವಿಕೋಪ ಕಾಮಗಾರಿಗಳ ಅಡಿಯಲ್ಲಿ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಅಲ್ಪಾವದಿ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19/05/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:19/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು

**ವಿಷಯದ ಸಂಖ್ಯೆ:180/2008-09**

ಚಲ್ಲಘಟ್ಟ ಕಣಿವೆ ಪ್ಯಾಕೇಜ್–3 ರ ವ್ಯಾಪ್ತಿಯಲ್ಲಿರುವ ಕೋರಮಂಗಲ ಒಳ ವರ್ತುಲ ರಸ್ತೆಯಲ್ಲಿರುವ ಅಮರಜ್ಯೋತಿ ಬಡಾವಣೆಯಲ್ಲಿ ಮಳೆ ನೀರು ಚರಂಡಿಗಳ ಅಭಿವೃದ್ಧಿ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ನೀರುಗಾಲುವೆ ಚಲ್ಲಘಟ್ಟ ಕಣಿವೆ ಪ್ಯಾಕೇಜ್–3 ರ ಅಡಿಯಲ್ಲಿರುವ ಕೋರಮಂಗಲ ಒಳ ವರ್ತುಲ ರಸ್ತೆಯಲ್ಲಿರುವ ಅಮರಜ್ಯೋತಿ ಬಡಾವಣೆಯನ್ನು ದಿನಾಂಕ:12/03/2008 ರಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮಾನ್ಯ ಆಯುಕ್ತರವರು, ಮುಖ್ಯ ಅಭಿಯಂತರರು (ಬೃಹತ್ ನೀರು ಗಾಲುವೆ) ಜಂಟಿ ಆಯುಕ್ತರು (ಪೂರ್ವ) ಹಾಗೂ ಮಹಾನಗರ ಪಾಲಿಕೆ ಅಧಿಕರಿಗಳೊಂದಿಗೆ ಪರಿವೀಕ್ಷಿಸಿದ್ದು, ಮಳೆಗಾಲದಲ್ಲಿ ಸದರಿ ಬಡಾವಣೆಯ ನೀರು ಸರಾಗವಾಗಿ ಹರಿದು ಹೋಗದೆ ಜಲಾವೃತವಾಗುವುದಾಗಿ ತಿಳಿದು ಬಂದಿರುತ್ತದೆ ಹಾಗೂ ಒಳ ವರ್ತುಲ ರಸ್ತೆ (ಕೋರಮಂಗಲ ರಿಂಗ್ ರಸ್ತೆ) ಯಲ್ಲಿ ಮಳೆಗಾಲದಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿದ್ದು, ಸದರಿ ಮಳೆ ನೀರು ಚರಂಡಿಗಳನ್ನು ಅಭಿವೃದ್ಧಿಪಡಿಸಲು ಆದೇಶಿಸಿದ್ದರ ಮೇರೆಗೆ 2007–08 ನೇ ಸಾಲಿನ ದರಪಟ್ಟಿಯ ದರಗಳನ್ನು ಅಳವಡಿಸಿಕೊಂಡು ರೂ.95.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಕೋರಿದೆ.

1. ಕಾಮಗಾರಿಯ ಅಂದಾಜು ಮೊತ್ತ ರೂ.95.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಕೋರಿದೆ. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಈಗಾಗಲೇ JNNURM ಯೋಜನೆ ಅಡಿಯಲ್ಲಿ ಚಲ್ಲಘಟ್ಟ ಕಣಿವೆ ಪುನರ್ ನವೀಕರಣ ಕಾಮಗಾರಿಗೆ ಮಂಜೂರಾಗಿದ್ದು, ಉಳಿತಾಯವಾಗುವ ಹಣದಿಂದ ಭರಿಸಬಹುದಾಗಿರುತ್ತದೆ. ಇದಕ್ಕೆ ಅನುಮೋದನೆ ದೊರೆಯದಿದ್ದಲ್ಲಿ ಕಾಮಗಾರಿಯ ಅವಶ್ಯಕತೆಯನ್ನು ಪರಿಗಣಿಸಿ, ಈ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮೊತ್ತದಲ್ಲಿ ಈ ಕಾಮಗಾರಿಯನ್ನು ನಿರ್ವಹಿಸಲಾಗುವುದು.

2. ಮುಂದೆ ಬರುವ ಮಳೆಯಿಂದ ಹಾನಿ ಸಂಭವಿಸುವುದನ್ನು ತಡೆಗಟ್ಟಲು ತುರ್ತು ಎಂದು ಪರಿಗಣಿಸಿ ಮಳೆಯಿಂದಾದ ಪ್ರಕೃತಿ ವಿಕೋಪ ಕಾಮಗಾರಿಗಳ ಅಡಿಯಲ್ಲಿ ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಅಲ್ಪಾವದಿ ಟೆಂಡರ್ ಕರೆದು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:19/05/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:19/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು

**ವಿಷಯದ ಸಂಖ್ಯೆ:181/08-09**

ಇಗ್ಗಲೂರು ಗ್ರಾಮದಲ್ಲಿ ಆಧುನಿಕ ಕಸಾಯಿಖಾನೆ ಘಟಕದ ಜಮೀನಿನ ಸುತ್ತಲು ಸಿಮೆಂಟ್ ಸಾಲಿಡ್ ಬ್ಲಾಕ್ ಕಾಂಪೌಂಡ್ ನಿರ್ಮಾಣ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

ಕರ್ನಾಟಕ ಉಚ್ಚನ್ಯಾಯಲಯದ ಆದೇಶದ ರೀತ್ಯಾ ನಗರದಲ್ಲಿರುವ ಕಸಾಯಿ ಖಾನೆಗಳನ್ನು ನಗರದ ಹೊರಭಾಗದಲ್ಲಿ ನಿರ್ಮಿಸಲು ಆದೇಶಿಸಿರುವ ಮೇರೆಗೆ, ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ಆನೇಕಲ್ ತಾಲ್ಲೂಕು ಇಗ್ಗಲೂರು ಗ್ರಾಮದಲ್ಲಿ 40.28 ಎಕರೆ ಜಮೀನನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ. ಹೀಗೆ ಹಸ್ತಾಂತರಿಸಲಾದ ಜಮೀನಿಗೆ ಸುಮಾರು 1000 ಮೀಟರ್ ಉದ್ದಕ್ಕೆ ಹಾಲಿ ಪ್ರಹರಿ ಕಾಂಪೌಂಡ್ ಗೋಡೆ ಇದ್ದು, ಇನ್ನೂಳಿದ 700 ಮೀಟರ್ ಉದ್ದಕ್ಕೆ ಪ್ರಹರಿ ಗೋಡೆಯನ್ನು ನಿರ್ಮಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಕಾಮಗಾರಿ ಕೈಗೊಳ್ಳಲು ದಿನಾಂಕ:12/02/2007 ರಂದು ಟೆಂಡರ್‌ಗಳನ್ನು ಕರೆದು ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಕಾಮಗಾರಿ ಪ್ರಗತಿಯಲ್ಲಿದ್ದಾಗ ಸ್ಥಳೀಯರು ಈ ಜಾಗದಲ್ಲಿ ಕಸಾಯಿಖಾನೆಯನ್ನು ನಿರ್ಮಾಣ ಮಾಡುವ ತೀವ್ರ ವಿರೋಧವನ್ನು ವ್ಯಕ್ತಪಡಿಸುತ್ತಾ ದಿನಾಂಕ:28/04/2007 ರಂದು ಸಾವಿರಾರು ಸಂಖ್ಯೆಯಲ್ಲಿ ಸೇರಿ ಜಮೀನಿನಲ್ಲಿ ಹಾಲಿ ಇದ್ದ ಹಾಗೂ ಹೊಸದಾಗಿ ನಿರ್ಮಿಸಲಾಗುತ್ತಿದ್ದ ಪ್ರಹರಿ ಗೋಡೆಯನ್ನು ಯಂತ್ರೋಪಕರಣಗಳನ್ನು ಉಪಯೋಗಿಸಿ ದ್ವಂಸಗೊಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಮುಂದುವರೆಸಲು ಸಾಧ್ಯವಾಗದ ಕಾರಣ ಟೆಂಡರ್ ಅನ್ನು ರದ್ದುಗೊಳಿಸಲಾಯಿತು. ಈಗ ಸಂಪೂರ್ಣ ಜಮೀನಿನ ಸುತ್ತಲು ಹೊಸದಾಗಿ ಪ್ರಹರಿ ಗೋಡೆಯನ್ನು ನಿರ್ಮಿಸಲು 2007-08 ನೇ ಸಾಲಿನ ದರಗಳ ಪಟ್ಟಿಯ ಆಧಾರದ ಮೇಲೆ ರೂ.96,50,000.00 ಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಯಿತು.

ಸ್ಥಳದಲ್ಲಿ ಕಸಾಯಿ ಖಾನೆ ಘಟಕದ ನಿರ್ಮಾಣ ಕಾಮಗಾರಿಯನ್ನು ತುರ್ತಾಗಿ ಪ್ರಾರಂಭಿಸಬೇಕಾಗಿದ್ದು, ಜಮೀನಿನ ಸುತ್ತಲು ಪ್ರಹರಿ ಗೋಡೆಯನ್ನು ನಿರ್ಮಿಸಬೇಕಾಗಿರುತ್ತದೆ, ಆದ ಕಾರಣ ಈ ಅಂದಾಜು ಪಟ್ಟಿಗೆ ಮಾನ್ಯ ಆಡಳಿತಗಾರರ ಅನುಮೋದನೆ ನಿರೀಕ್ಷಿಸಿ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಸಂಖ್ಯೆ ಕಾಪಾಲಿ-1 (ಎಸ್.ಡಬ್ಲ್ಯೂ.ಎಂ.) ಟೆಂಟರ್/01/08-09, ದಿನಾಂಕ:02/04/2008 ರಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಯಿತು. ಈ ಟೆಂಡರ್ ಏಳು ಗುತ್ತಿಗೆದಾರರು ಭಾಗವಹಿಸಿದ್ದವರಲ್ಲಿ ಜಿಲ್ಲಾ ಸಾಮಾಜಿಕ ಮತ್ತು ಮಾರಾಟ ಸಹಕಾರ ಸಂಘ ನಿಯಮಿತ, ಬೆಂಗಳೂರು. ಮತ್ತು ಮೆ॥ SAAGRR INFRA LTD., ರವರುಗಳು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುತ್ತರೆ. ಆರ್ಥಿಕ ಬಿಡ್‌ನಲ್ಲಿ ಕನಿಷ್ಠ ಟೆಂಡರ್‌ದಾರರಾದ ಮೆ॥ SAAGRR INFRA LTD., ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಸ್ತುಗಳ ನಿರ್ವಹಣೆ ವಿಭಾಗದವರು ಮಂಡಿಸಿರುತ್ತಾರೆ.

ಸದರಿ ಟೆಂಡರ್‌ಗಿಟ್ಟ ಮೊಬಲಗು ರೂ.96,30,225.00 ಗಳಾಗಿದ್ದು, ಗುತ್ತಿಗೆದಾರರಾದ ಮೆ॥ SAAGRR INFRA LTD.,ರವರು ರೂ.1,41,13,515.00 (ಒಂದು ಕೋಟಿ ನಲವತ್ತೊಂದು ಲಕ್ಷದ ಹದಿಮೂರು ಸಾವಿರದ ಐದುನೂರ ಹದಿನೈದು ರೂಪಾಯಿ) ಗಳನ್ನು ನಮೂದಿಸಿದ್ದು, ಈ ದರಗಳು ಶೇ:46.55 ರಷ್ಟು ಅಂದಾಜು ಪಟ್ಟಿಯ ದರಗಳಿಗೆ ಹೆಚ್ಚಾಗಿರುತ್ತದೆ. ನಮೂದಿಸಿದ ದರಗಳು ಹೆಚ್ಚಾಗಿದ್ದುದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಯಿತು. ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಕಡಿಮೆ ಮಾಡಿದ್ದು, ಒಟ್ಟು ಮೊತ್ತ ರೂ.1,15,27,847.00 (ಒಂದು ಕೋಟಿ ಹದಿನೈದು ಲಕ್ಷದ ಇಪ್ಪತ್ತೇಳು ಸಾವಿರದ ಎಂಟುನೂರ ನಲವತ್ತೇಳು ರೂಪಾಯಿ ಮಾತ್ರ) ಅಂದಾಜು ಪಟ್ಟಿಯ ದರಗಳಿಗೆ ಶೇಕಡ:19.70 ರಷ್ಟು ಹೆಚ್ಚುವರಿ ದರಗಳಿಗೆ ಒಪ್ಪಿಗೆಯನ್ನು ಸೂಚಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಗಿನ ಪ್ರಸ್ತಾವನೆಗಳಿಗೆ ಅನುಮೋದನೆ ಕೋರಿ ಮಂಡಿಸಲಾಗಿದೆ.

1) ಮೇಲ್ಕಂಡ ಕಾಮಗಾರಿಯ ರೂ.96,50,000.0 ಗಳ ಅಂದಾಜು ಪಟ್ಟಿಗೆ ಅನುಮೋದನೆ.
2) ಅಂದಾಜು ಪಟ್ಟಿಗೆ ಅನುಮೋದನೆಯನ್ನು ನಿರೀಕ್ಷಿಸಿ ಕಾಮಗಾರಿಗೆ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲು ತೆಗೆದುಕೊಂಡು ಕ್ರಮಕ್ಕೆ ಸ್ಥಿರೀಕರಣ.
3) ಮೇಲ್ಕಂಡ ಕಾಮಗಾರಿಗೆ ಮೆ॥ SAAGRR INFRA LTD..ರವರು ಸಲ್ಲಿಸಿರುವ ಅಂದಾಜು ಪಟ್ಟಿಯ ದರಗಳ ಮೇಲೆ ಶೇಕಡ:19.70 ರಷ್ಟು ಹೆಚ್ಚಿನ ರೂ.1,15,27,847.00 (ಒಂದು ಕೋಟಿ ಹದಿನೈದು ಲಕ್ಷದ ಇಪ್ಪತ್ತೇಳು ಸಾವಿರದ ಎಂಟುನೂರ ನಲವತ್ತೇಳು ರೂಪಾಯಿ ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/05/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:21/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ



<u>ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:28/05/2008 ರ ನಡವಳಿಗಳು</u>

<u>ವಿಷಯದ ಸಂಖ್ಯೆ:182/08–09</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಿಂಚಣಿದಾರರಿಗೆ ಹೆಚ್ಚುವರಿ ತುಟ್ಟಿಭತ್ಯೆಯನ್ನು ಮಂಜೂರು ಮಾಡುವ ಬಗ್ಗೆ.

**<u>ಪ್ರಸ್ತಾವನೆ:</u>**

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಎಫ್‌ಪಿ(ಎಸ್.ಪಿ.ಎಲ್)02 ಸಿ.ಪಿ.ಪಿ. 2008, ದಿನಾಂಕ: 02/04/2008 ರಂತೆ ದಿನಾಂಕ:01/01/2008 ರಿಂದ ಜಾರಿಗೆ ಬರುವಂತೆ ಪಿಂಚಣಿದಾರರಿಗೆ ಒಂದು ಕಂತು ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಶೇಕಡ:5.25% ರಷ್ಟು ಮಂಜೂರು ಮಾಡಲಾಗಿರುತ್ತದೆ. ಅದರಂತೆ ಈಗಾಗಲೇ ಮಂಜೂರಾಗಿರುವ ಶೇ:17.5% ಜೊತೆಗೆ ಶೇ:5.25% ರಷ್ಟು ಸೇರಿ ಶೇ:22.75% ರಂತೆ ಪಾವತಿಸಬೇಕಾಗಿರುತ್ತದೆ. ಕರ್ನಾಟಕ ಸರ್ಕಾರಿ ಸೇವಾ ನಿಯಮಗಳ ಪ್ರಕಾರ ನಿವೃತ್ತಿ ವೇತನದ ನಿಯಮಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಅಳವಡಿಸಬೇಕಾಗಿದ್ದು, ಸದರಿ ಸರ್ಕಾರಿ ಆದೇಶವನ್ನು ಪಾಲಿಕೆಗೆ ಅಳವಡಿಸಿಕೊಂಡು ದಿನಾಂಕ:01/01/2008 ರಿಂದ ಅನ್ವಯಿಸುವಂತೆ ಶೇ:5.25% ಹೆಚ್ಚುವರಿ ತುಟ್ಟಿ ಭತ್ಯೆಯನ್ನು ಪಾವತಿಸಬೇಕಾಗಿರುತ್ತದೆ.

ಸದರಿ ಹೆಚ್ಚುವರಿ ತುಟ್ಟಿ ಭತ್ಯಗಳ ವೆಚ್ಚವನ್ನು 2008–09ನೇ ಸಾಲಿನ ಆಯವ್ಯಯದ ಅಂದಾಜುಗಳ ಲೆಕ್ಕ ಶೀರ್ಷಿಕೆ 02 – ಸಾಮಾನ್ಯ ಆಡಳಿತ / ಆಡಳಿತ ವೆಚ್ಚಗಳು / ಸೇವಾ ನಿವೃತ್ತಿ ಸೌಲಭ್ಯಗಳ ಅಡಿಯಲ್ಲಿ ಈಗಾಗಲೇ ಅನುವು ಮಾಡಿರುವುದರಿಂದ ಅಳವಡಿಸಿಕೊಳ್ಳುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22/05/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:22/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**<u>ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30/05/2008 ರ ನಡವಳಿಗಳು</u>**

<u>ವಿಷಯ ಸಂಖ್ಯೆ:152/2008-09</u>

Providing Asphalting to Sankey Road, 13th cross Sadashiva Nagara and C.V.Raman Road in Ward No.99 ರ ಕಾಮಗಾರಿ ಬಗ್ಗೆ.

<u>ಪ್ರಸ್ತಾವನೆ:</u>

Providing Asphalting to Sankey Road, 13th cross Sadashiva Nagara and C.V.Raman road in Ward No.99 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.74.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು, ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.73,98,995.00 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ರವರು ಶೇಕಡ 43.77% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 41.95% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚಿಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ವ್ಯತ್ಯಾಸದ ದರದನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.56% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,05,02,515.14 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ: 24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.56 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,05,02,515.14 (ರೂ.ಒಂದು ಕೋಟಿ ಐದು ಲಕ್ಷದ ಎರಡು ಸಾವಿರದ ಐದುನೂರ ಹದಿನೈದು ಮತ್ತು ಪೈಸೆ ಹದಿನಾಲ್ಕು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿ.

<u>ತೀರ್ಮಾನ:</u> ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:30/05/2008 ರ ನಡವಳಿಗಳು

ವಿಷಯದ ಸಂಖ್ಯೆ:153/08-09

Asphalting to Bellary Main Road from BDA Circle to Hebbal Fly over in Ward No.96,98 & 99 ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Asphalting to Bellary Main Road from BDA Circle to Hebbal Fly over in Ward No.96,98 & 99 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತದೆ ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.99.86 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.99,82,317.00 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು ಶೇಕಡ 43.72% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಜಯಮಹಲ್) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 41.91% ರಷ್ಟು ಹೆಚ್ಚುವರಿ ದರಗಳು ಸಮರ್ಪಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ವ್ಯತ್ಯಾಸದ ದರಕ್ಕೆ ಹೋಲಿಸಿದಾಗ ನಮೂದಿಸಿದ ದರಗಳಾದ ಶೇಕಡ 14.55% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆ ಎಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,41,66,300.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ ನಅಇ/116/ಎಂಎನ್‌ವೈ/2002 ದಿನಾಂಕ: 24-01-2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಮಗಾರಿ ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು / ಆಡಳಿತಗಾರರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ ಟಾರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.55% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,41,66,300.00 (ರೂ.ಒಂದು ಕೋಟಿ ನಲವತ್ತೊಂದು ಲಕ್ಷದ ಅರವತ್ತಾರು ಸಾವಿರದ ಮುನ್ನೂರು ಮಾತ್ರ) ಗಳ ಟೆಂಡರ್ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:13/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:02/06/2008 ರ ನಡವಳಿಗಳು**

**ವಿಷಯದ ಸಂಖ್ಯೆ:185/2008–09**

Formation of Service Road on Western side of Bellary Road near Veterinary Hospital in Bangalore ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Formation of Service Road on Western side of Bellary Road near Veterinary Hospital in Bangalore ರ ಕಾಮಗಾರಿಯ ಅಂದಾಜು ಮೊತ್ತ ರೂ.54.75 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದರು. ಅವರುಗಳು ಶ್ರೀ.ಮುನಿರತ್ನ ಹಾಗೂ ಶ್ರೀ.ಹೆಚ್.ಕೆ.ಸುರೇಶ್, ರವರು ಭಾಗವಹಿಸಿ ಅರ್ಹರಾಗಿರುತ್ತಾರೆ. ಸದರಿ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:01/01/2008 ರಂದು ತೆರೆಯಲಾಗಿದ್ದು. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ:

1. ಶ್ರೀ.ಮುನಿರತ್ನ ರವರು ಒಟ್ಟು ರೂ.75,76,706.20 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ 25.17% ರಷ್ಟು ಹೆಚ್ಚಾಗಿರುತ್ತದೆ.

2. ಶ್ರೀ.ಹೆಚ್.ಕೆ.ಸುರೇಶ್ ರವರು ಒಟ್ಟು ರೂ.77,08,870.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ 27.35% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಮುನಿರತ್ನ ರವರು ಕನಿಷ್ಟ ದರ ನಮೂದಿಸಿದ್ದು, ಸದರಿ ದರವನ್ನು 2007–08 ನೇ ಸಾಲಿನ ದರ ಸೂಚಿಗೆ ಹೋಲಿಸಿದಲ್ಲಿ ಶೇ.25.17% ರಷ್ಟು ಹೆಚ್ಚಿಗೆ ನಮೂದಿಸಿರುವುದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಶೇಕಡ 25.17% ರಿಂದ ಶೇ.25.50% ಗೆ ಒಪ್ಪಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ.ಮುನಿರತ್ನ ರವರು ನಮೂದಿಸಿರುವ ಮೊತ್ತ ರೂ.75,36,068.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಮೊತ್ತ ರೂ.60,53,066.78 ಗಳಿಗೆ ಹೋಲಿಸಿದಾಗ ಶೇ.24.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22/02/2008 ರ ವರದಿ.

**ತೀರ್ಮಾನ:** ಆಯುಕ್ತರವರ ದಿನಾಂಕ:22/02/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:02/06/2008 ರ ನಡವಳಿಗಳು

**ವಿಷಯದ ಸಂಖ್ಯೆ:185/2008–09**

Formation of Service Road on Western side of Bellary Road near Veterinary Hospital in Bangalore ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Formation of Service Road on Western side of Bellary Road near Veterinary Hospital in Bangalore ರ ಕಾಮಗಾರಿಯ ಅಂದಾಜು ಮೊತ್ತ ರೂ.54.75 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರಿನಲ್ಲಿ ಇಬ್ಬರು ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದರು. ಅವರುಗಳು ಶ್ರೀ.ಮುನಿರತ್ನ ಹಾಗೂ ಶ್ರೀ.ಹೆಚ್.ಕೆ.ಸುರೇಶ್, ರವರು ಭಾಗವಹಿಸಿ ಅರ್ಹರಾಗಿರುತ್ತಾರೆ. ಸದರಿ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:01/01/2008 ರಂದು ತೆರೆಯಲಾಗಿದ್ದು. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ:

1. ಶ್ರೀ.ಮುನಿರತ್ನ ರವರು ಒಟ್ಟು ರೂ.75,76,706.20 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ 25.17% ರಷ್ಟು ಹೆಚ್ಚಾಗಿರುತ್ತದೆ.

2. ಶ್ರೀ.ಹೆಚ್.ಕೆ.ಸುರೇಶ್ ರವರು ಒಟ್ಟು ರೂ.77,08,870.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ 27.35% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ.ಮುನಿರತ್ನ ರವರು ಕನಿಷ್ಟ ದರ ನಮೂದಿಸಿದ್ದು, ಸದರಿ ದರವನ್ನು 2007–08 ನೇ ಸಾಲಿನ ದರ ಸೂಚಿಗೆ ಹೋಲಿಸಿದಲ್ಲಿ ಶೇ.25.17% ರಷ್ಟು ಹೆಚ್ಚಿಗೆ ನಮೂದಿಸಿರುವುದರಿಂದ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಶೇಕಡ 25.17% ರಿಂದ ಶೇ.25.50% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ.ಮುನಿರತ್ನ ರವರು ನಮೂದಿಸಿರುವ ಮೊತ್ತ ರೂ.75,36,068.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಮೊತ್ತ ರೂ.60,53,066.78 ಗಳಿಗೆ ಹೋಲಿಸಿದಾಗ ಶೇ.24.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕುರಿತು ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:22/02/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:22/02/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:02/06/2008 ರ ನಡವಳಿಗಳು**

**ವಿಷಯ ಸಂಖ್ಯೆ:186/2008–09**

Formation of service road on eastern side of Bellary road near CBI office junction in Bangalore ರ ಕಾಮಗಾರಿಯ ಬಗ್ಗೆ.

**ಪ್ರಸ್ತಾವನೆ:**

Formation of service road on eastern side of Bellary road near CBI office junction in Bangalore ರ ಕಾಮಗಾರಿಯ ಅಂದಾಜು ಮೊತ್ತ ರೂ.54.75 ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಅಂದಾಜು ಪಟ್ಟಿಯ ಪ್ರಕ್ರಿಯೆಯಲ್ಲಿ ಕೈಗೊಂಡಿದ್ದು, ಸದರಿ ಇಬ್ಬರು ಗುತ್ತಿಗೆದಾರರಾದ ಶ್ರೀ. ಮುನಿರತ್ನ ಮತ್ತು ಶ್ರೀ.ಹೆಚ್.ಕೆ.ಸುರೇಶ್, ರವರು ಭಾಗವಹಿಸಿ ಅರ್ಹರಾಗಿರುತ್ತಾರೆ. ಸದರಿ ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 01/01/2008 ರಂದು ತೆರೆಯಲಾಗಿದ್ದು, ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿವೆ.

(1) ಶ್ರೀ.ಮುನಿರತ್ನ ರವರು ಒಟ್ಟು ರೂ.77,29,590.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.27.40% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ.ಹೆಚ್.ಕೆ.ಸುರೇಶ್ ರವರು ಒಟ್ಟು ರೂ.78,75,420.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.29.81% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಮುನಿರತ್ನ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, ಸದರಿ ದರವನ್ನು 2007–08 ನೇ ಸಾಲಿನ ದರ ಸೂಚಿಗೆ ಹೋಲಿಸಿದಲ್ಲಿ ಶೇ.27.40% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುವುದರಿಂದ ದಿನಾಂಕ: 16/02/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.27.40% ರಿಂದ ಶೇ.24.50% ಗೆ ಇಳಿಸಿ, ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಮುನಿರತ್ನ ರವರ ಗುತ್ತಿಗೆಯ ಮೊತ್ತ ರು .75.53.463.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿಸಿದ ದರಗಳ ಮೊತ್ತ ರೂ.60,67,038.65 ಗಳಿಗೆ ಹೋಲಿಸಿದಾಗ ಶೇ.24.50% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:28/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:28/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/06/2008 ರ ನಡವಳಿಗಳು

**ವಿಷಯದ ಸಂಖ್ಯೆ:171/2008–09**

Providing Chain link fencing along Primary and Secondary Storm Water Drain in Kathrigupe Minor valley from Srinivasa Nagara to Girinagara and N.R.Colony to Kamakya layout ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ನೀರುಗಾಲುವೆ ನವೀಕರಣ ಯೋಜನೆ ವೃಷಭಾವತಿ ಕಣಿವೆ ಅಡಿಯಲ್ಲಿ ಪ್ಯಾಕೇಜ್–5 ರ Providing Chain link fencing along Primary and Secondary Storm Water Drain in Kathrigupe Minor valley from Srinivasa Nagara to Girinagara and N.R.Colony to Kamakya layout ಕಾಮಗಾರಿಯ ಅಂದಾಜುಪಟ್ಟಿ ಮೊತ್ತ ರೂ.90.00 ಲಕ್ಷಗಳಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಕಾರ್ಯಪಾಲಕ ಅಭಿಯಂತರರು (ವೃಷಭಾವತಿ ಕಣಿವೆ) ರವರು ಟೆಂಡರ್ ಕರೆದಿದ್ದು, ಸದರಿ ಕಾಮಗಾರಿಯ ಟೆಂಡರ್‌ನಲ್ಲಿ 3 ಜನ ಗುತ್ತಿಗೆದಾರರು ಭಾಗವಹಿಸಿದ್ದು, ಸದರಿಯವರ ತಾಂತ್ರಿಕ ಬಿಡ್ಡ್‌ಗಳನ್ನು ಪರಿಶೀಲಿಸಲಾಗಿ ತಾಂತ್ರಿಕ ಬಿಡ್‌ನಲ್ಲಿ ಮೂರು ಜನ ಗುತ್ತಿಗೆದಾರರು ಅರ್ಹರಾಗಿದ್ದು, ಇವುಗಳ ಆರ್ಥಿಕ ಬಿಡ್ಡ್‌ಗಳನ್ನು ತೆರೆದು, ಪರಿಶೀಲಿಸಿ ತುಲನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಗುತ್ತಿಗೆದಾರರ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ನಮೂದಿಸಿರುವ ಶೇಕಡವಾರು (ಮೊತ್ತ ರೂ.ಗಳಲ್ಲಿ) |
|---|---|---|---|
| 1 | ಬಿ.ಪಿ.ಎಸ್.ಬಾಬು | 89.83 | 19.11% ರಷ್ಟು ಹೆಚ್ಚು (ರೂ.1,07,02,011.80) |
| 2 | ಜಿ.ಎಂ.ರವೀಂದ್ರ | 89.83 | 25.02% ರಷ್ಟು ಹೆಚ್ಚು (ರೂ.1,12,33,403.10) |
| 3 | ಡಿ.ರವೀಂದ್ರ | 89.83 | 32.20% ರಷ್ಟು ಹೆಚ್ಚು (ರೂ.1,18,78,382.00) |

ಕನಿಷ್ಠ ಗುತ್ತಿಗೆದಾರರಾದ ಶ್ರೀ. ಬಿ.ಪಿ.ಎಸ್.ಬಾಬು ರವರು ನಮೂದಿಸಿರುವ ದರಗಳ ಮೊತ್ತವು ರೂ. 1,07,02,011.80 ಗಳನ್ನು 2007–08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ತಯಾರಿಸಿದ ಅಂದಾಜು ಪಟ್ಟಿಯ ಮೊತ್ತಕ್ಕೆ ತುಲನೆ ಮಾಡಿದಾಗ ಶೇ19.11% ಹೆಚ್ಚಿರುತ್ತದೆ. ಸದರಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲಾಗಿ ಗುತ್ತಿಗೆದಾರರು ಸದರಿ ಕಾಮಗಾರಿಯನ್ನು ಶೇ.14.00 (ರೂ.1,02,41,376.88) ಹೆಚ್ಚುವರಿಗೆ ನಿರ್ವಹಿಸುವುದಾಗಿ ಒಪ್ಪಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ, ಟೆಂಡರ್ ಅನುಮೋದನೆ ಹಾಗೂ ಗುತ್ತಿಗೆದಾರರು ಸದರಿ ಕಾಮಗಾರಿಗೆ ನಮೂದಿಸಿರುವ ಮೊತ್ತ ರೂ.1,02,41,376.88 ಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:17/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು